

ಬೆಂಗಳೂರು ಅರೆನಗರೀಕರಣ ಪ್ರದೇಶದ ಕಾಮನ್ಸ್ ಗಳ ಸಾಮಾನ್ಯ

# ಪಕ್ಷಿಗಳು

ನಾಗೇಶ್ ಒ. ಎಸ್.

ತೇಜಸ್ವಿನಿ ಜೆ. ಎಸ್.

ವೃಕ್ಷ ಪ್ರಕಾಶನ

# ಬೆಂಗಳೂರು ಅರೆನಗರೀಕರಣ ಪ್ರದೇಶದ
# ಕಾಮನ್ಸ್ ಗಳ ಸಾಮಾನ್ಯ ಪಕ್ಷಿಗಳು

## Common Birds of Commons of Bangalore
## Peri - Urban Area

A Handbook about Birds of Peri-Urban Bangalore by Wildlife Conservation Group.
(Mr. Nagesh O. S. , Ms. Tejaswini J. S.) Adavi Field Station, Ontemaranadoddi,
Ragiahalli Post, Bangalore Urban District, PIN – 560083.
Tel.: +91 9483996832 Email: wcg.bnp@gmail.com,
Web: www.Indiawcg.org

Collaboration with:
Bengaluru Sustainability Forum, National Centre for Biological Sciences,
GKVK, Bellary Road, Bangalore - 560065.
Tel.: +91-80-23666408 / extn 6408
Web: www.bengalurusustainabilityforum.org

Ramakrishna Mission, Shivanahalli, Ragihalli Post, Jigani Hobali, Anekal Taluk,
Bangalore Urban District, PIN – 560083.
Tel.: +91 9480993407. Email: shivanahalli@rkmm.org,
Web: www.shivanahalli.rkmm.org

Publication:
Vruksha Prakashana, Adavi Field Station, Ontemaranadoddi, Ragihalli Post,
Bangalore – 560083.

| | |
|---|---|
| First impression | : 2024 |
| Pages | : 20 |
| Paper | : 170gsm |
| Price | : 50/- |
| Copy Right | : Authors |
| Copies | : 100 |

**Acknowledgement :** Mr. Hariharan I. S., Mrs. Bhagavathi B. M., Dr. Ashwatha K. N., Mrs. Deepthi N., Mr. Dhanaraj M., Mr. Mahadeva K. C., Ms. Shanthamma S., Dr. Naveen Kumar Naik, Ms. Sneha B. D., Mr. Anand R. M., Mr. Dhanush S., Mr. Jaikumar R., Dr. Hariprasad T.P.N., Mr. Shankarappa K. P., Mrs. Savitha S., Mr. Sunil Ramareddy


**Special Thanks:** Bengaluru Sustainability Forum, Ramakrishna Mission-Shivanahalli, Wildlife Conservation Group and team members.

**Layout & Design: Mr. Dhanaraj M**.

**Front Cover Image: Mrs. Bhagavathi B. M.**

**Back Cover Images: Mr. Dhanaraj M**.

# ನಮಗೊಂದು ಜಾಗ




**ಅಧ್ಯಯನ ಪ್ರದೇಶದ ನಕ್ಷೆ:** ಬೆಂಗಳೂರು ಅರೆನಗರೀಕರಣ ಪ್ರದೇಶವಾಗಿದ್ದು, ಎರಡು ಗ್ರಾಮ ಪಂಚಾಯಿತಿಗಳು ಒಳಗೊಂಡಿದೆ. ರಾಗಿಹಳ್ಳಿ ಗ್ರಾಮ ಪಂಚಾಯಿತಿ ಮತ್ತು ಮಂಟಪ ಗ್ರಾಮ ಪಂಚಾಯಿತಿಗಳು. ಇವು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿವೆ. ರಾಗಿಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಯನ ಪ್ರದೇಶವು 12°42'2. 32"N ಉತ್ತರ ಅಕ್ಷಾಂಶದಿಂದ 12°45'29.57"N ಉತ್ತರ ಅಕ್ಷಾಂಶದವರಿಗೆ ಮತ್ತು 77°33'24.81"E ಪೂರ್ವ ರೇಖಾಂಶದಿಂದ 77°35'48.50"E ಪೂರ್ವ ರೇಖಾಂಶದವರಿಗೆ ಕಂಡುಬರುತ್ತದೆ. ಮಂಟಪ ಗ್ರಾಮ ಪಂಚಾಯಿತಿಯ ಅಧ್ಯಯನ ಪ್ರದೇಶವು 12°46'39.64"N ಉತ್ತರ ಅಕ್ಷಾಂಶದಿಂದ 12°50'19.96"N ಉತ್ತರ ಅಕ್ಷಾಂಶದವರಿಗೆ ಮತ್ತು 77°34'52.47"E ಪೂರ್ವ ರೇಖಾಂಶದಿಂದ 77°37'25.19"E ಪೂರ್ವ ರೇಖಾಂಶದವರಿಗೆ ಕಂಡುಬರುತ್ತದೆ.

**ಆವಾಸ ಮತ್ತು ಅನಿಸಿಕೆ:** ಕಾಮನ್ಸ್ ಗಳು ಅನೇಕ ಸಮುದಾಯಗಳಿಂದ ರಕ್ಷಿಸಲ್ಪಟ್ಟ, ನೂರಾರು ವರ್ಷಗಳಿಂದ ನಿರ್ವಹಿಸಿಕೊಂಡು ಬಂದಿರುವ ಭೂಮಿಯಾಗಿದ್ದು, ನೈಸರ್ಗಿಕ ವಸ್ತುಗಳನ್ನು ಒಳಗೊಂಡಂತೆ ಸಮಾಜದ ಎಲ್ಲಾ ಸದಸ್ಯರಿಗೆ ಪ್ರವೇಶಿಸಬಹುದಾದ ಸಾಂಸ್ಕೃತಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳುಳ್ಳ ಪ್ರದೇಶವಾಗಿದೆ. ಉದಾಹರಣೆಗಳೆಂದರೆ ಹಳ್ಳಿ ಅರಣ್ಯಗಳು, ದೇವರ ಕಾಡುಗಳು, ಗುಂಡುತೋಪುಗಳು, ಸ್ಮಶಾನಗಳು, ಕೆರೆಗಳು, ಗೋಮಾಳಗಳು, ಗೋಕಟ್ಟೆಗಳು, ರಸ್ತೆ ಬದಿಯ ಸಾಲು ಮರಗಳು, ಅರಳಿಕಟ್ಟೆಗಳು ಮತ್ತು ಇತ್ಯಾದಿ.

ಇವು ಬೆಂಗಳೂರಿನ ಅರೆನಗರೀಕರಣ ಪ್ರದೇಶದ ಕಾಮನ್ಸ್ ಗಳಾಗಿದ್ದು, ಅತ್ಯಂತ ಜೀವವೈವಿಧ್ಯತೆಯ ಸಮೃದ್ಧ ಭಂಡಾರಗಳಾಗಿವೆ. ಇಂತಹ ಪ್ರದೇಶದಲ್ಲಿ ಶಾಲಾ ಮಕ್ಕಳಿಗೆ ಮತ್ತು ಜನ ಸಾಮಾನ್ಯರಿಗೆ ಕಾಮನ್ಸ್ ಗಳನ್ನು ಮತ್ತು ಅಲ್ಲಿರುವ ಜೀವವೈವಿಧ್ಯತೆಯನ್ನು ಅರ್ಥೈಸಲು ಆ ಪ್ರದೇಶಗಳಲ್ಲಿ ಜೀವವೈವಿಧ್ಯತೆಯ ಸಮೀಕ್ಷೆ ಬಹಳ ಮುಖ್ಯವಾಗುತ್ತದೆ. ಹಾಗಾಗಿ, ಅಧ್ಯಯನ ಪ್ರದೇಶದ ಕಾಮನ್ಸ್ ಗಳಲ್ಲಿ ಸಮೀಕ್ಷೆ ಮಾಡಿ ಅಲ್ಲಿನ ಜೀವವೈವಿಧ್ಯತೆಯನ್ನು ಕಂಡುಕೊಳ್ಳಲಾಗಿದ್ದು, ಅದರಲ್ಲಿ ಪಕ್ಷಿಗಳು ಸಹ ಒಳಗೊಂಡಿವೆ. ಪಕ್ಷಿಗಳಿಗೆ ಸೂಕ್ತವಾದ ಆವಾಸಗಳಾದ ಕುರುಚಲು ಕಾಡು, ಗೋಮಾಳ (ಹುಲ್ಲುಗಾವಲು), ಕೆರೆ (ಜೌಗು ಪ್ರದೇಶಗಳು), ರಸ್ತೆಬದಿಯ ಸಾಲುಮರಗಳು, ಉದ್ಯಾನವನಗಳು ಮತ್ತು ಜನವಸತಿ ಪ್ರದೇಶಗಳನ್ನು ಇಲ್ಲಿ ನೋಡಬಹುದು.

ಈ ಅರೆ ನಗರೀಕರಣ ಪ್ರದೇಶದ ಕಾಮನ್ಸ್ ಗಳು ಇನ್ನೂ ಸ್ವಲ್ಪ ವರ್ಷಗಳಲ್ಲೇ ಅಭಿವೃದ್ಧಿಯ ಸಲುವಾಗಿ ನಶಿಸಿಹೋಗುವುದರ ಜೊತೆಗೆ ಜೀವವೈವಿದ್ಯತೆಯೂ ಸಹ ನಿರ್ನಾಮವಾಗುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಜೈವಿಕ ಪರಿಸರ ವ್ಯವಸ್ಥೆಯನ್ನು ಅಧ್ಯಯನ ಮಾಡುವಲ್ಲಿ ಸಮುದಾಯಗಳು ಮತ್ತು ಮಕ್ಕಳ ಪಾತ್ರ ಬಹಳ ಮುಖ್ಯ. ಅವರಿಗೆ ಇವುಗಳ ಮಹತ್ವದ ಬಗ್ಗೆ ಶಿಕ್ಷಣ ಮತ್ತು ಅರಿವು ಮೂಡಿಸುವುದು ಬಹಳ ಸೂಕ್ತ. ಆ ನಿಟ್ಟಿನಲ್ಲಿ ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್, ರಾಮಕೃಷ್ಣ ಮಿಷನ್, ಶಿವನಹಳ್ಳಿ ಮತ್ತು Bengaluru Sustainability Forum ಸಂಸ್ಥೆಗಳ Reclaiming the commons at the fringes in peri-urban Bangalore ಎಂಬ ಈ ಯೋಜನೆಯು ಬಹಳ ಮುಖ್ಯ.

# ಪಕ್ಷಿಗಳು


ಬಾನಿನಲ್ಲಿ ಸ್ವಚ್ಛಂದವಾಗಿ ಹಾರಾಡಿ, ತಮ್ಮ ವಿವಿಧ ರೀತಿಯ ಕೂಗು ಹಾಗೂ ಬಣ್ಣಗಳಿಂದ ಎಲ್ಲರನ್ನೂ ಆಕರ್ಷಿಸುವ ಸುಂದರವಾದ ಜೀವಿಗಳೇ ಪಕ್ಷಿಗಳು. ಅನಾದಿಕಾಲದಿಂದಲೂ ಪಕ್ಷಿ ಮತ್ತು ಮಾನವನ ಗಾಢ ಸಂಬಂಧ ಅವಿರತವಾಗಿ ಸಾಗಿ ಬಂದಿದ್ದು, ಆಧುನಿಕ ಯುಗದಲ್ಲಿ ಮಾನವನು ಪಕ್ಷಿಗಳ ಹಾರಾಟವನ್ನು ಕಂಡು ಬೆರಗಾಗಿ, ವಿಮಾನವನ್ನು ಸೃಷ್ಟಿಸಿದ್ದಾನೆ.

ರೆಕ್ಕೆ ಮತ್ತು ಗರಿಗಳ ಸಹಾಯದಿಂದ ಹಾರುವುದು, ಪಕ್ಷಿಗಳ ವಿಶೇಷ ಗುಣ. ಹಾರಲಾರದ ಪಕ್ಷಿಗಳೂ ಸಹ ಇವೆ. ಉದಾಹರಣೆಗೆ ಉಷ್ಟ್ರ ಪಕ್ಷಿ, ಪೆಂಗ್ವಿನ್ ಇತ್ಯಾದಿ. ಬಾವಲಿಗಳು ಹಕ್ಕಿಗಳಂತೆ ಹಾರಬಲ್ಲವು ಆದರೆ ಪಕ್ಷಿಗಳಿಗಿರುವಂತಹ ಪುಕ್ಕದ ರೆಕ್ಕೆಗಳಿಲ್ಲ. ಇವುಗಳು ಸಸ್ತನಿ ವರ್ಗಕ್ಕೆ ಸೇರುತ್ತವೆ.

ಹಕ್ಕಿಗಳು 'ಏವ್ಸ್' (Aves) ಎಂಬ ವರ್ಗಕ್ಕೆ ಸೇರಿದ ಜೀವಿಗಳು. ಈ ಪದ ಲ್ಯಾಟಿನ್ ಪದವಾದ 'ಏವಿಸ್ (Avis) ನಿಂದು ಉತ್ಪತ್ತಿಯಾಗಿದ್ದು, ಇದರ ಅರ್ಥ ಹಕ್ಕಿ ಎಂದಾಗುತ್ತದೆ. ಹಕ್ಕಿಗಳನ್ನು 'ಪಕ್ಷಿಗಳು' ಎಂದು ನಮ್ಮ ಭಾಷೆಯಲ್ಲಿ ಗುರುತಿಸಿದರೆ ಅದು ಸಂಸ್ಕೃತ ಮೂಲ. 'ಪಕ್ಷಿ' ಎಂದರೆ 'ಪಕ್ಷ' ಅಥವಾ ರೆಕ್ಕೆಗಳನ್ನುಳ್ಳದ್ದು ಎಂದಾಗುತ್ತದೆ. ರೆಕ್ಕೆ ಮತ್ತು ಗರಿಗಳ ಹೊದಿಕೆಯೇ ಈ ಗುಂಪಿನ ಜೀವಿಗಳನ್ನು ಪ್ರಾಣಿ ಜಗತ್ತಿನಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆಯುವಂತೆ ಮಾಡಿದೆ. ಪ್ರಪಂಚದಲ್ಲಿ ಸುಮಾರು 10,000 ಪಕ್ಷಿ ಪ್ರಭೇದಗಳಿವೆ. ಇವುಗಳಲ್ಲಿ ಸುಮಾರು 1377 ಪ್ರಭೇದಗಳು ಭಾರತದಲ್ಲಿವೆ. ನಮ್ಮ ರಾಜ್ಯದಲ್ಲಿ ಸುಮಾರು 570 ವಿವಿಧ ಪ್ರಭೇದಗಳನ್ನು ಕಾಣಬಹುದಾಗಿದೆ. ಪ್ರಪಂಚದ ಎಲ್ಲಾ ಪಕ್ಷಿಗಳನ್ನು ಅಂಗರಚನೆ ಹಾಗೂ ಇತರೆ ಹೋಲಿಕೆಗಳ ಆಧಾರದ ಮೇಲೆ ವಿವಿಧ ಗಣಗಳಾಗಿ ವಿಂಗಡಿಸಲಾಗಿದೆ. ಹಕ್ಕಿಗಳ ಚರ್ಮೆ, ಆವಾಸ, ಕೊಕ್ಕು, ಕಾಲು ಇತ್ಯಾದಿಗಳನ್ನು ಆಧರಿಸಿ ಈ ಗಣಗಳನ್ನು 249 ಕುಟುಂಬಗಳಾಗಿ ವಿಂಗಡಿಸಲಾಗಿದೆ. ಒಂದು ಕುಟುಂಬಕ್ಕೆ ಸೇರಿದ ಹಕ್ಕಿಗಳ ಅಭ್ಯಾಸ, ನಡವಳಿಕೆಗಳಲ್ಲಿ ಹೋಲಿಕೆ ಇರುತ್ತದೆ. ಕೊಕ್ಕು, ಕಾಲು, ಪಾದಗಳ ಆಕಾರ, ಚಲನವಲನಗಳಲ್ಲಿಯೂ ಸಾಮ್ಯವನ್ನು ಗುರುತಿಸಬಹುದು. ಆದರೆ ಎಲ್ಲಾ ಸಂದರ್ಭಗಳಲ್ಲೂ ಹೊರರೂಪದ ಸಾಮ್ಯದಿಂದ ಹಕ್ಕಿಗಳ ಕುಟುಂಬವನ್ನು ಗುರುತಿಸಲು ಸಾಧ್ಯವಾಗದು. ಕುಟುಂಬವನ್ನು ಜಾತಿಯ (Genera) ಸಣ್ಣ ಘಟಕಗಳಾಗಿ ವಿಂಗಡಿಸಲಾಗಿದೆ. ಜಾತಿಯೊಂದರಲ್ಲಿ ಹಲವಾರು ಪ್ರಭೇದ (Species) ಗಳಿವೆ. ಒಂದೇ ಪ್ರಭೇದದ ಹಕ್ಕಿಗಳು ವಿವಿಧ ಭಾಗಗಳಲ್ಲಿದ್ದಾಗ ಅಲ್ಲಿನ ವಾಯುಗುಣ ಮತ್ತು ಭೌಗೋಳಿಕ ಪರಿಸರಗಳ ಕಾರಣದಿಂದ ಗಾತ್ರ ಮತ್ತು ಬಣ್ಣಗಳಲ್ಲಿ ವ್ಯತ್ಯಾಸವಿರುತ್ತದೆ.

## ಪಕ್ಷಿಯ ಭಾಗಗಳು

1. Head - ತಲೆ
2. Bill - ಕೊಕ್ಕು
3. Neck - ಕತ್ತು
4. Chest - ಎದೆ
5. Wing - ರೆಕ್ಕೆ
6. Abdomen - ದೇಹದ ತಳಭಾಗ
7. Foot - ಕಾಲು
8. Tail - ಬಾಲ
9. Rump - ಕೆಳಬೆನ್ನು



# ನವಿಲು
## Indian Peafowl
*Pavo cristatus*



© ಅಶ್ವಥ ಕೆ. ಎನ್.

**ಲಕ್ಷಣಗಳು:** ಗಂಡು ನವಿಲುಗಳು ತಮ್ಮ ಉದ್ದನೆಯ, ಹೊಳಪಿನ ನೀಲಿ ಹಾಗು ಹಸಿರು ಮಿಶ್ರಿತ ಗರಿಗಳ ಜೊತೆಗೆ ನೂರಾರು ಕಣ್ಣುಗಳಂತೆ ಇರುವ ಚುಕ್ಕಿಗಳನ್ನು ಹೊಂದಿರುತ್ತವೆ. ಹೆಣ್ಣು ನವಿಲುಗಳು ಹಸಿರು ಬಣ್ಣದ ಕುತ್ತಿಗೆ ಹಾಗು ಕಂದು ಬಣ್ಣದಿಂದ ಕೂಡಿದ್ದು ಚಿಕ್ಕ ಗರಿಗಳ ಗೊಂಚಲನ್ನು ಹೊಂದಿರುತ್ತವೆ.

**ಹಂಚಿಕೆ ಮತ್ತು ಆವಾಸ:** ಭಾರತೀಯ ಉಪಖಂಡ, ಶ್ರೀಲಂಕಾ; ಮೈದಾನದ ಪ್ರದೇಶ, ಕುರುಚಲು ಕಾಡುಗಳಲ್ಲಿ ವಾಸಿಸುತ್ತವೆ.

**ಆಹಾರ:** ಕಾಳು, ಕೀಟ, ಸರೀಸೃಪ.

**ಕೂಗು:** ಕ್ಯೇ. . ಓ . . . ಕ್ಯೇ. . ಓ . . . ಕ್ಯೇ. . ಓ . . .

**ಗೂಡು:** ನೆಲಮಟ್ಟದ ಪೊದೆಗಳಲ್ಲಿ

**ಸಂತಾನೋತ್ಪತ್ತಿ:** ಜನವರಿ – ಅಕ್ಟೋಬರ್. 4-7 ಕೆನೆ ಬಣ್ಣದ ಮೊಟ್ಟೆಗಳಿಗೆ ಸುಮಾರು 27-29 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಭಾರತದ ರಾಷ್ಟ್ರ ಪಕ್ಷಿ.
ಹೆಣ್ಣು ಪಕ್ಷಿಯನ್ನು ಆಕರ್ಷಿಸಲು ಗಂಡು ಪಕ್ಷಿಯು ಪ್ರದರ್ಶಿಸುವ ನೃತ್ಯ.

# ಚಂದ್ರ ಮುಕುಟ
**Hoopoe**
*Upupa epops*



© ಭಗವತಿ ಬಿ. ಎಂ.

**ಲಕ್ಷಣಗಳು:** ಚಂದ್ರಮುಕುಟವು ಮೈಮೇಲೆಲ್ಲಾ ಜೀಬ್ರಾ ಪಟ್ಟೆಗಳಂತೆ ಕಪ್ಪು ಬಿಳಿ ಪಟ್ಟೆಗಳಿರುವ ಹಕ್ಕಿ. ಕುತ್ತಿಗೆ ಮತ್ತು ಎದೆಯ ಭಾಗ ಕಿತ್ತಲೆ ಬಣ್ಣ. ತಲೆಯ ಮೇಲೆ ನವಿಲಿಗಿರುವಂತೆ ಬೀಸಣಿಗೆ ಜೊಟ್ಟಿ ಇದೆ. ಜೊಟ್ಟಿ ತುದಿಯಲ್ಲಿ ಕಪ್ಪು ಮಚ್ಚೆಗಳಿವೆ. ಜೊಟ್ಟಿಯನ್ನು ಇದು ಮಡಚಿಕೊಂಡಾಗ ಹಿಮ್ಮುಖನಾಗಿರುವ ಇನ್ನೊಂದು ಕೊಕ್ಕಿನಂತೆ ಕಾಣುತ್ತದೆ. ಒಂಟಿಯಾಗಿ ಅಥವಾ ಜೋಡಿಗಳಲ್ಲಿ ನೆಲ ಕೆದಕುತ್ತಾ ಹುಳುಗಳನ್ನು ಹಿಡಿದು ತಿನ್ನುತ್ತವೆ.

**ಹಂಚಿಕೆ ಮತ್ತು ಆವಾಸ:** ವಿಶ್ವದ ಎಲ್ಲೆಡೆ; ಹುಲ್ಲು ಮೈದಾನಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

**ಆಹಾರ:** ಕೀಟಗಳು, ಸಣ್ಣ ಸರೀಸೃಪಗಳು, ಕಪ್ಪೆಗಳು, ಬೀಜಗಳು ಮತ್ತು ಹಣ್ಣುಗಳಂತಹ ಸಸ್ಯ ಪದಾರ್ಥಗಳು.

**ಕೂಗು:** ಹೂಪ್_ ಹು. .

**ಗೂಡು:** ಮರದ ಪೊಟರೆ.

**ಸಂತಾನೋತ್ಪತ್ತಿ:** ಫೆಬ್ರವರಿ–ಏಪ್ರಿಲ್; 4-5 ಹಾಲು ನೀಲಿ ಬಣ್ಣದ ಮೊಟ್ಟೆ. 15 - 18 ದಿನಗಳ ವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಇವುಗಳ ತಲೆಯಲ್ಲಿರುವ ಅತಿ ಶಕ್ತಿಯುತವಾದ ಸ್ನಾಯುಗಳು ಕೊಕ್ಕುಗಳನ್ನು ಮಣ್ಣಿನ ಒಳಗೆ ಇರುವಾಗಲೂ ತೆರೆಯಲು ಸಹಕರಿಸುತ್ತವೆ. ಹೆಣ್ಣು ಹಕ್ಕಿಯನ್ನು ಒಲಿಸಲು ಅಥವಾ ಇತರ ಹಕ್ಕಿಗಳನ್ನು ಎದುರಿಸಲು ಬೀಸಣಿಗೆಯಂತ ಜೊಟ್ಟಿಯನ್ನು ಬಿಚ್ಚಿ ಮಡಚುತ್ತದೆ.
ಇದು ಇಸ್ರೇಲ್ ದೇಶದ ರಾಷ್ಟ್ರೀಯ ಪಕ್ಷಿ.

## ನೀಲಕಂಠ
**Indian Roller**
*Coracias benghalensis*



© ಭಗವತಿ ಬಿ. ಎಂ.

**ಲಕ್ಷಣಗಳು:** ಪಾರಿವಾಳಕ್ಕಿಂತ ಸಣ್ಣದಾದ ಪಕ್ಷಿ. ತಲೆ, ರೆಕ್ಕೆಯು ತಿಳಿ ನೀಲಿಯಾಗಿದ್ದು ಕತ್ತು ಮತ್ತು ಎದೆ ಕಂದು ಬಣ್ಣವಿರುತ್ತದೆ. ಕೊಕ್ಕು ಕಪ್ಪು; ಹಾರುವಾಗ ರೆಕ್ಕೆಯ ಮೇಲಿನ ನೀಲಿ ಪಟ್ಟಿಗಳು ಸ್ಪಷ್ಟವಾಗಿ ಕಾಣುತ್ತವೆ.

**ಹಂಚಿಕೆ ಮತ್ತು ಆವಾಸ:** ಭಾರತದೆಲ್ಲೆಡೆ;. ಕೃಷಿಭೂಮಿ, ಕುರುಚಲು ಕಾಡುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಮರಗಳು, ಬಂಡೆಗಳು ಹಾಗೂ ವಿದ್ಯುತ್ ತಂತಿಗಳ ಮೇಲೆ ಕುಳಿತಿರುವುದನ್ನು ಸಾಮಾನ್ಯವಾಗಿ ಕಾಣಬಹುದು.

**ಆಹಾರ:** ಕೀಟಗಳು, ಉಭಯವಾಸಿಗಳು, ಸರೀಸೃಪಗಳು, ಪಕ್ಷಿಗಳು ಮತ್ತು ಸಣ್ಣ ಸಸ್ತನಿಗಳು.

**ಕೂಗು:** ಚಕ್ . . . ಚಕ್. . . ನಂತಹ ಕರ್ಕಶವಾದ ಶಬ್ಧ.

**ಗೂಡು:** ಮರದ ಪೊಟರೆ.

**ಸಂತಾನೋತ್ಪತ್ತಿ:** ಮಾರ್ಚ್ – ಜುಲೈ; 4-5 ಬಿಳಿ ಮೊಟ್ಟೆಗಳಿಗೆ ಸುಮಾರು 17 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಕರ್ನಾಟಕ, ಆಂಧ್ರಪ್ರದೇಶ, ಬಿಹಾರ ಮತ್ತು ಒಡಿಶಾ ರಾಜ್ಯದ ರಾಜ್ಯ ಪಕ್ಷಿಯಾಗಿರುತ್ತದೆ. ಹಿಂದೂ ದಂತಕಥೆಗಳಿಗೆ ಸಂಬಂಧಿಸಿದಂತೆ ವಿಷ್ಣುವಿಗೆ ಪವಿತ್ರವಾದುದು ಎಂದು ಹೇಳಲಾಗುತ್ತದೆ, ಗಂಡು ಪಕ್ಷಿಯು ಹೆಣ್ಣನ್ನು ಆಕರ್ಷಿಸಲು ಆಗಸಕ್ಕೆ ಚಿಮ್ಮಿ ಗಿರಕಿ ಹೊಡೆಯುತ್ತದೆ.

# ಸಣ್ಣ ಮಿಂಚುಳ್ಳಿ
## Common Kingfisher
*Alcedo atthis*



© ನಾಗೇಶ್ ಒ. ಎಸ್.

**ಲಕ್ಷಣಗಳು:** ಗುಬ್ಬಚ್ಚಿ ಗಾತ್ರವಿರುವ ಇದರ ದೇಹವು ಹೆಚ್ಚಾಗಿ ಹೊಳೆಯುವ ನೀಲಿ ಹಾಗು ಕಂದು ಬಣ್ಣದಿಂದ ಕೂಡಿದ್ದು, ಪುಟ್ಟ ಚೂಪಾದ ಬಾಲವನ್ನು ಹೊಂದಿದೆ. ಕಣ್ಣಿನ ಸುತ್ತ ಕೆಂಪು; ಕೆನ್ನೆ, ಗದ್ದ ಬಿಳಿ; ಎದೆ, ಹೊಟ್ಟೆ, ತಳಭಾಗ ತಿಳಿ ಕಂದು ಬಣ್ಣವನ್ನು ಹೊಂದಿರುತ್ತದೆ. ಎಲ್ಲಾ ಬಗೆಯ ಮಿಂಚುಳ್ಳಿಗಳ ಹಾಗೆಯೇ ಈ ಸಣ್ಣ ಮಿಂಚುಳ್ಳಿಯು ತನ್ನ ತೂಕದ 60% ಆಹಾರವನ್ನು ಪ್ರತೀದಿನ

**ಹಂಚಿಕೆ ಮತ್ತು ಆವಾಸ:** ಯುರೋಪ್, ಏಷ್ಯಾ ಮತ್ತು ಉತ್ತರ ಆಫ್ರಿಕಾದಲ್ಲಿ ವ್ಯಾಪಕವಾಗಿ ಕಾಣಸಿಗುತ್ತದೆ;. ನದಿ, ಕಾಲುವೆ, ಕೆರೆ.

**ಆಹಾರ:** ಮೀನು, ಸಣ್ಣ ಕಪ್ಪೆಗಳು.

**ಕೂಗು:** ಚಿಚೀ . . . .   ಚಿಚೀ . . . .  ಚಿಚೀ . . . .

**ಗೂಡು:** ನೀರಿನ ದಂಡೆಯಲ್ಲಿನ ಬಿಲ.

**ಸಂತಾನೋತ್ಪತ್ತಿ:** ಮಾರ್ಚ್–ಜೂನ್, 5 - 7 ಬಿಳಿ ಮೊಟ್ಟೆಗಳಿಗೆ ಸುಮಾರು 18 - 21 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ವೇಗದಲ್ಲಿ ನೀರಿಗೆ ಧುಮುಕಿ ತನ್ನ ಬೇಟೆಯನ್ನು ಹಿಡಿದು ಬರುವ ಇದು, ಶರವೇಗದಲ್ಲಿ ಹಾರಾಡಬಲ್ಲದು!

# ಸಣ್ಣ ಕಳ್ಳಿಪೀರ
## Green Bee-eater
*Merops orientalis*



© ನಾಗೇಶ್ ಓ. ಎಸ್.

**ಲಕ್ಷಣಗಳು:** ರೆಕ್ಕೆ ಮತ್ತು ನೆತ್ತಿ ಹಸಿರು–ಕಂದು ಬಣ್ಣದಿಂದ ಕೂಡಿರುತ್ತದೆ. ಮೊನಚಾದ ಸ್ವಲ್ಪ ಬಾಗಿದ ಕೊಕ್ಕು ಕಪ್ಪು; ಬಾಲದ ಮಧ್ಯದಿಂದ ಸೂಜಿಯಂತೆ ನೀಳವಾದ ಗರಿಗಳಿರುತ್ತವೆ. ಹೆಸರಿಗೆ ತಕ್ಕಂತೆ ಮಧು ಸಂಗ್ರಹಣೆಗೆ ಹೊರಡುವ ಜೇನು ಹುಳುಗಳನ್ನು ಬೇಟೆಯಾಡುತ್ತವೆ.

**ಹಂಚಿಕೆ ಮತ್ತು ಆವಾಸ:** ಥೈಲ್ಯಾಂಡ್ ಮತ್ತು ಕಾಂಬೋಡಿಯಾ, ದಕ್ಷಿಣ ಚೀನಾ, ಭಾರತದೆಲ್ಲೆಡೆ; ಜನವಸತಿ ಪ್ರದೇಶ.

**ಆಹಾರ:** ಜೇನು ಹುಳು, ಏರೋಪ್ಲೇನ್ ಚಿಟ್ಟೆ ಮತ್ತು ಪತಂಗಗಳು.

**ಕೂಗು:** ಟ್ರೀ.... ಟ್ರೀ.... ಟ್ರೀ....

**ಗೂಡು:** ಬಂಡೆ ಮತ್ತು ಮಣ್ಣಿನ ಪ್ರಪಾತಗಳಲ್ಲಿ ಬಿಲಗಳನ್ನು ತೋಡಿದ ರೀತಿಯ ಗೂಡು.

**ಸಂತಾನೋತ್ಪತ್ತಿ:** ಫೆಬ್ರವರಿ–ಮೇ; 4-6 ಬಿಳಿ ಮೊಟ್ಟೆಗಳನ್ನು ಇಡುತ್ತವೆ.

**ವಿಶೇಷತೆ:** ಈ ಹಕ್ಕಿಯು ಮರದ ಕೊಂಬೆಯ ಮೇಲೆ ಕುಳಿತು ಹಾರುತ್ತಿರುವ ಕೀಟಗಳನ್ನು ವೀಕ್ಷಿಸುತ್ತಾ, ಹುಳುಗಳನ್ನು ಕಂಡೊಡನೆ ಅಟ್ಟಾಡಿಸಿ ಹಿಡಿದು ಮತ್ತದೇ ಕೊಂಬೆ ಮೇಲೆ ಬಂದು ಕುಳಿತು ಹುಳುಗಳನ್ನು ಕೊಕ್ಕಿನಿಂದ ಕೊಂಬೆಗೆ ಹೊಡೆದು, ಹುಳುಗಳನ್ನು ಕುಕ್ಕಿ–ಸಾಯಿಸಿ ನುಂಗುತ್ತವೆ.
ಸಾಮೂಹಿಕವಾಗಿ ಜೀವಿಸುತ್ತವೆ.

# ಕೆಂಬೂತ
## Greater Coucal
*Centropus sinensis*



© ಭಗವತಿ ಬಿ. ಎಂ.

**ಲಕ್ಷಣಗಳು:** ಉದ್ದನೆಯ ಬಾಲ, ಕಂದು ಬಣ್ಣದ ರೆಕ್ಕೆಗಳನ್ನು ಹಾಗೂ ಕೆಂಪು ಬಣ್ಣದ ಕಣ್ಣನ್ನು ಹೊಂದಿರುತ್ತದೆ. ಒಂಟಿಯಾಗಿ ಅಥವಾ ಜೋಡಿಗಳಲ್ಲಿ ವಾಸಿಸುವ ಇವು ಎತ್ತರಕ್ಕೆ ಹಾರದೆ, ನೆಲದ ಮೇಲೆ ಪೊದೆಗಳಡಿಯಲ್ಲಿಯೇ ಆಹಾರವನ್ನರಸುತ್ತಾ ನುಸುಳುತ್ತಿರುತ್ತವೆ.

**ಹಂಚಿಕೆ ಮತ್ತು ಆವಾಸ:** ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದ ಕಾಡುಗಳು,; ಹುಲ್ಲುಗಾವಲುಗಳು, ತೋಟಗಳು ಮತ್ತು ಜನವಸತಿ ಸಮೀಪದ ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತವೆ.

**ಆಹಾರ:** ಹಾವಿನ ಮರಿ, ಹಲ್ಲಿ, ಹಕ್ಕಿಯ ಮರಿ, ಮೊಟ್ಟೆ.

**ಕೂಗು:** ಕುಕ್ಕುಕ್ಕುಕ್ಕುಕ್ಕೂ. . . .ಕುಕ್ಕುಕ್ಕುಕ್ಕುಕ್ಕೂ. . . .

**ಗೂಡು:** ಹುಲ್ಲು, ಕಡ್ಡಿಗಳಿಂದ ಕೂಡಿದ ವೃತ್ತಾಕಾರದ ಗೂಡು.

**ಸಂತಾನೋತ್ಪತ್ತಿ:** ಫೆಬ್ರವರಿ–ಸೆಪ್ಟೆಂಬರ್; 3-4 ಬಿಳಿ ಮೊಟ್ಟೆಗಳನ್ನು ಇಡುತ್ತವೆ.

**ವಿಶೇಷತೆ:** ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಪಕ್ಷಿಯು ಬಾಲವನ್ನು ಬೆನ್ನಿನ ಮೇಲೆ ಎತ್ತಿ ಹಿಡಿದು ಬೀಸಣಿಗೆಯಂತೆ ಬೀಸುತ್ತಾ ರೆಕ್ಕೆಗಳನ್ನು ಜೋಲುಬಿಟ್ಟು ಹೆಣ್ಣಿನ ಮುಂದೆ ಅತ್ತಿತ್ತ ನಡೆಯುತ್ತದೆ.

# ಹಾಲಕ್ಕಿ
## Spotted Owlet
*Athene brama*



© ಅಶ್ವಥ ಕೆ. ಎನ್.

**ಲಕ್ಷಣಗಳು:** ದೊಡ್ಡ ಹಳದಿ ಕಣ್ಣು; ಎದೆಯ ಮೇಲೆ ಬೂದು ಚುಕ್ಕೆ; ಹೊಟ್ಟೆ, ತಳಭಾಗ ಬಿಳಿ, ದೇಹವಿಡಿ ಬಿಳಿ ಚುಕ್ಕೆ; ಚಿಕ್ಕ ಕೊಕ್ಕು; ಬೂದು ಕಾಲುಗಳು; ಕಪ್ಪು ಪಟ್ಟಿಯಿರುವ ಬೂದು ಮೋಟು ಬಾಲವಿರುತ್ತದೆ.

**ಹಂಚಿಕೆ ಮತ್ತು ಆವಾಸ:** ದಕ್ಷಿಣ ಏಷ್ಯಾದ ದೇಶಗಳು; ಕೃಷಿಭೂಮಿ ಮತ್ತು ಮಾನವ ವಸತಿ ಸೇರಿದಂತೆ ಬಯಲು ಪ್ರದೇಶಗಳು.

**ಆಹಾರ:** ವಿವಿಧ ಕೀಟಗಳು ಮತ್ತು ಸಣ್ಣ ಕಶೇರುಕಗಳು.

**ಕೂಗು:** ಕೀಚ್ . . . . ಕೀಚ್ . . . .ಕೀಚ್ . . . . ಚಿಟರ್ .... ಚಿಟರ್ ....ಚಿಟರ್ ....

**ಗೂಡು:** ಮರದ ಪೊಟರೆ.

**ಸಂತಾನೋತ್ಪತ್ತಿ:** ನವೆಂಬರ್ – ಏಪ್ರಿಲ್; 3-4 ಮೊಟ್ಟೆಗಳಿಗೆ ಸುಮಾರು 28-33 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಎಲ್ಲಾ ದಿಕ್ಕುಗಳಲ್ಲೂ ತನ್ನ ಕತ್ತನ್ನು ತಿರುಗಿಸಬಲ್ಲದು.

# ನತ್ತಿಂಗ
## Common Indian Nightjar
*Caprimulgus asiaticus*



© ನಾಗೇಶ್ ಒ. ಎಸ್.

**ಲಕ್ಷಣಗಳು:** ದೇಹದ ಮೇಲೆ ಕಪ್ಪು ಗೆರೆ; ಗದ್ದ ಕಂದು, ಗದ್ದದ ಮೇಲೆ ಬಿಳಿ ಮಚ್ಚೆ; ಚಿಕ್ಕ ಕೊಕ್ಕು ಕಪ್ಪಗಿರುತ್ತದೆ. ಇದರ ಬಣ್ಣ ಮರದ ತೊಗಟೆಗೆ ಹಾಗೂ ತರಗೆಲೆಗಳಿಗೆ ಹೋಲುವುದರಿಂದ ಪತ್ತೆಹಚ್ಚುವುದು ಕಷ್ಟಸಾಧ್ಯ. ಇದು ಗೂಬೆಯಂತೆ ನಿಶಾಚರಿ ಹಕ್ಕಿಯಾಗಿದ್ದು ಮುಸ್ಸಂಜೆ ನಂತರ ಮೆಲುದನಿಯ ಕೂಗಿನಿಂದ ಇದರ ಚಟುವಟಿಕೆ ಆರಂಭ.

**ಹಂಚಿಕೆ ಮತ್ತು ಆವಾಸ:** ದಕ್ಷಿಣ ಏಷ್ಯಾದ ದೇಶ ಮತ್ತು ಆಗ್ನೇಯ ಏಷ್ಯಾ; ಕುರುಚಲು ಕಾಡು, ಬಂಡೆ ಪ್ರದೇಶ, ಬಂಡೆನೆಲೆದ ಮೇಲೆ ಇದರ ವಾಸ.

**ಆಹಾರ:** ರಾತ್ರಿ ಸಮಯದಲ್ಲಿ ಹಾರಾಡುವ ಕೀಟಗಳು, ದುಂಬಿ, ರೆಕ್ಕೆಗೊದ್ದ, ಪತಂಗ, ಮಿಡತೆ, ಕಂಬಳಿಹುಳು, ಕೀಟಗಳು ಮತ್ತು ಕೀಟಗಳ ಮೊಟ್ಟೆಯೂ ಹೌದು.

**ಕೂಗು:** ಚುಳುಕ್_ ಚುಳುಕ್_ ಚುಳುಕ್_

**ಗೂಡು:** ಈ ಪಕ್ಷಿಯು ಗೂಡು ಕಟ್ಟದೆ ನೆಲವನ್ನು ಕೆದರಿ ಗೂಡು ಮಾಡುತ್ತದೆ.

**ಸಂತಾನೋತ್ಪತ್ತಿ:** ಫೆಬ್ರವರಿ– ಸೆಪ್ಟೆಂಬರ್; 2 ಕೆನೆ ಗುಲಾಬಿಯ ಬಣ್ಣದ ಮೊಟ್ಟೆಗಳನ್ನಿಟ್ಟು ಸುಮಾರು 17-18 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡಿಸುತ್ತವೆ.

**ವಿಶೇಷತೆ:** ರಸ್ತೆಯ ಮೇಲೆ ವಾಹನದ ಬೆಳಕಿಗೆ ಕಣ್ಣುಗಳು ಕೆಂಪಗೆ ಮಿನುಗುತ್ತವೆ.

# ಗರುಡ
**Brahminy Kite**
*Haliastur indus*



© ಭಗವತಿ ಬಿ. ಎಂ.

**ಲಕ್ಷಣಗಳು:** ಇವುಗಳ ದೇಹ ಕೆಂಪು ಕಂದು ಬಣ್ಣದ್ದಾಗಿದ್ದು, ತಲೆ, ಕತ್ತು ಮತ್ತು ಎದೆಯ ಭಾಗದಲ್ಲಿ ಬಿಳಿ ಬಣ್ಣದಿಂದ ಕೂಡಿದ್ದು, ಮೊನಚಾದ ಬಲಿಷ್ಠ ಕೊಕ್ಕನ್ನು ಹೊಂದಿದೆ. ಕಾಲುಗಳು ಹಳದಿ ಬಣ್ಣ ಮತ್ತು ಕಂದು ಬಣ್ಣದ ಬಾಲವನ್ನು ಹೊಂದಿರುತ್ತದೆ.

**ಹಂಚಿಕೆ ಮತ್ತು ಆವಾಸ:** ಭಾರತ, ಆಗ್ನೇಯ ಏಷ್ಯಾ ಮತ್ತು ಆಸ್ಟ್ರೇಲಿಯಾ; ಕೃಷಿಭೂಮಿ, ತೋಟ, ಜನವಸತಿ ಪ್ರದೇಶ, ಕರಾವಳಿ ಪ್ರದೇಶದ ಬದಿ.

**ಆಹಾರ:** ಮೀನು, ಏಡಿ, ಕಪ್ಪೆ ಮತ್ತು ಹಾವುಗಳು.

**ಕೂಗು:** ಕ್ಯಾಕ್ಯ ... ಕ್ಯಾಕ್ಯ ... ಕ್ಯಾಕ್ಯ ...

**ಗೂಡು:** ಸಣ್ಣ ಕೊಂಬೆಗಳನ್ನು ಬಳಸಿ ಬಟ್ಟಲಾಕಾರದ ಗೂಡುನ್ನು ಮರಗಳ ಮೇಲೆ ಕಟ್ಟುತ್ತದೆ.

**ಸಂತಾನೋತ್ಪತ್ತಿ:** ಡಿಸೆಂಬರ್–ಏಪ್ರಿಲ್; 2-3 ಬೂದು ಮಿಶ್ರಿತ ಬಿಳಿಯ ಮೊಟ್ಟೆಗಳನ್ನು ಇಟ್ಟು ಸುಮಾರು 26 ದಿನಗಳವರಿಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಹೆಣ್ಣು ಗರುಡ ಗಾತ್ರದಲ್ಲಿ ಗಂಡಿಗಿಂತ ದೊಡ್ಡದಾಗಿರುತ್ತದೆ.
ವಿಷ್ಣುವಿನ ವಾಹನವೆಂಬ ನಂಬಿಕೆ.

# ನೀರು ಕಾಗೆ
**Little Cormorant**
*Phalacrocorax niger*



© ಭಗವತಿ ಬಿ. ಎಂ.

**ಲಕ್ಷಣಗಳು:** ಕಾಗೆಗಳಿಗಿಂತ ಕೊಂಚ ದೊಡ್ಡದು ಹಾಗು ಹದ್ದುಗಳಿಗಿಂತ ಸ್ವಲ್ಪ ಚಿಕ್ಕದು. ಉದ್ದನೆಯ ಕೊಕ್ಕನ್ನು ಹೊಂದಿರುತ್ತದೆ. ಗದ್ದದ ಕೆಳಗೆ ಬಿಳಿ ಮಚ್ಚೆ; ನೀಳವಾದ ಕೊಂಕುವ ಕತ್ತು; ಜಾಲಪಾದಗಳು ಕಪ್ಪಗಿರುತ್ತವೆ. ನೀರಿನ ದಡದ ಮೇಲೆ ಅಥವಾ ಮರದ ಮೇಲೆ ತಮ್ಮ ರೆಕ್ಕೆಯನ್ನು ಬಿಸಿಲಿನಲ್ಲಿ ಆರಿಸಿಕೊಳ್ಳುತ್ತಿರುತ್ತವೆ.

**ಹಂಚಿಕೆ ಮತ್ತು ಆವಾಸ:** ದಕ್ಷಿಣ ಏಷ್ಯಾದ ದೇಶಗಳು; ಜಲ ಪ್ರದೇಶ.

**ಆಹಾರ:** ಸಣ್ಣ ಹುಳುಗಳು ಹಾಗು ಮೀನುಗಳು.

**ಕೂಗು:** ಕರ್ಕಶ ಕೂಗು.

**ಗೂಡು:** ಕಡ್ಡಿಗಳಿಂದ ಕೂಡಿದ ವೃತ್ತಾಕಾರದ ಗೂಡುಗಳನ್ನು ಕಟ್ಟುತ್ತವೆ.

**ಸಂತಾನೋತ್ಪತ್ತಿ:** ಜುಲೈ – ಫೆಬ್ರವರಿ; 3-6 ತಿಳಿ ನೀಲಿ ಮಿಶ್ರಿತ ಹಸಿರು ಮೊಟ್ಟೆಗಳನ್ನಿಟ್ಟು 14-21 ದಿನಗಳ ವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ತಮ್ಮ ಸಣ್ಣ ಬೇಟೆಯನ್ನು ನೀರಿನಲ್ಲೇ ತಿಂದು, ದೊಡ್ಡ ಗಾತ್ರದ ಮೀನುಗಳನ್ನು ದಡದಲ್ಲಿ ತಂದು ನುಂಗುತ್ತವೆ.

# ಕೊಳದ ಬಕ
## Indian Pond-Heron
*Ardeola grayii*



© ಭಗವತಿ ಬಿ. ಎಂ.

**ಲಕ್ಷಣಗಳು:** ತಲೆ, ಕತ್ತು, ಬೆನ್ನು ಮಾಸಲು ಕಂದು; ರೆಕ್ಕೆ, ಬಾಲ ಬೆಳ್ಳಗಿದ್ದು, ಹಾರುವಾಗ ಸ್ಪಷ್ಟವಾಗಿ ಕಾಣುತ್ತದೆ. ಕೊಕ್ಕು ಹಳದಿ, ಕಾಲುಗಳು ಬೂದು ಮಿಶ್ರಿತ ಹಳದಿಯಾಗಿರುತ್ತವೆ.

**ಹಂಚಿಕೆ ಮತ್ತು ಆವಾಸ:** ದಕ್ಷಿಣ ಇರಾನ್, ಭಾರತೀಯ ಉಪಖಂಡ, ಬರ್ಮಾ ಮತ್ತು ಶ್ರೀಲಂಕಾ; ಕೊಳ, ಕೆರೆ, ಗದ್ದೆ ಕಾಲುವೆ, ಮ್ಯಾಂಗ್ರೋವ್ಗಳು ಮತ್ತು ಜೌಗು ಪ್ರದೇಶ.

**ಆಹಾರ:** ಮೀನು, ಕಪ್ಪೆ, ಏಡಿ, ಇತರೆ ಕೀಟಗಳು ಮತ್ತು ಮರಿ ಆಮೆಗಳು.

**ಕೂಗು:** ಕ್ರಾಕ್... ಕಕ್ಕ್ ... ಕ್ರಾಕ್...

**ಗೂಡು:** ಕಡ್ಡಿಗಳಿಂದ ಕೂಡಿದ ವೃತ್ತಾಕಾರದ ಗೂಡುಗಳನ್ನು ಕಟ್ಟುತ್ತವೆ.

**ಸಂತಾನೋತ್ಪತ್ತಿ:** ಮೇ–ಸೆಪ್ಟೆಂಬರ್; 3-5 ತಿಳಿ ಹಸಿರು ಮಿಶ್ರಿತ ನೀಲಿ ಮೊಟ್ಟೆಗಳಿಗೆ ಸುಮಾರು 24 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಸಂತಾನೋತ್ಪತ್ತಿಯ ಸಮಯದಲ್ಲಿ ಗಂಡು ಪಕ್ಷಿಯ ತಲೆ ಭಾಗ ಕಡು ಕಂದಾಗಿದ್ದು, ನೆತ್ತಿಯಿಂದ ಎರಡು ನೀಳವಾದ ಬಿಳಿ ಗರಿಗಳು ಮೂಡುತ್ತವೆ.

## ಕಾಜಾಣ
## Black Drongo
*Dicrurus macrocercus*



© ಭಗವತಿ ಬಿ. ಎಂ.

**ಲಕ್ಷಣಗಳು:** ಹೊಳಪುಳ್ಳ ಕಪ್ಪು ಪಕ್ಷಿ, ಬಾಲ ಕವಲಾಗಿದ್ದು, ಮೊನಚಾಗಿರುತ್ತದೆ. ಚಿಕ್ಕ ಕೊಕ್ಕು ಕಪ್ಪಗಿರುತ್ತದೆ. ಕಣ್ಣಿನ ಕೆಳ ಭಾಗದಲ್ಲಿ ಬಿಳಿ ಚುಕ್ಕೆಯನ್ನು ಹೊಂದಿರುತ್ತದೆ.

**ಹಂಚಿಕೆ ಮತ್ತು ಆವಾಸ:** ಭಾರತ, ಶ್ರೀಲಂಕಾ, ಬಾಂಗ್ಲಾದೇಶ; ನಿತ್ಯ ಹರಿದ್ವರ್ಣ, ಅರೆ ನಿತ್ಯ ಹರಿದ್ವರ್ಣ, ಕುರುಚಲು ಕಾಡು, ಬಯಲು ಪ್ರದೇಶ, ಕೃಷಿ ಭೂಮಿ, ಜನವಸತಿ ಪ್ರದೇಶ.

**ಆಹಾರ:** ಕೀಟಗಳು.

**ಕೂಗು:** ಚೀ . . . ಚೀ . . .ಚೀ . . .

**ಗೂಡು:** ಮೃದುವಾದ ಕಡ್ಡಿಗಳು ಹಾಗೂ ಜೇಡರ ಬಲೆಯನ್ನು ಸೇರಿಸಿ ಬಟ್ಟಲಿನಾಕಾರದ ಗೂಡನ್ನು ಕಟ್ಟುತ್ತದೆ.

**ಸಂತಾನೋತ್ಪತ್ತಿ:** ಮಾರ್ಚ್–ಜೂನ್; ಕಂದು ಚುಕ್ಕೆಗಳಿರುವ 3-5 ಬಿಳಿ ಮೊಟ್ಟೆಗಳನ್ನು ಇಡುತ್ತವೆ.

**ವಿಶೇಷತೆ:** ತನ್ನ ವೈರಿ ಎಷ್ಟೇ ಬಲಶಾಲಿಯಾಗಿದ್ದರೂ ಬೆನ್ನಟ್ಟಿ ಓಡಿಸಿ, ತನ್ನ ಗೂಡನ್ನು ರಕ್ಷಿಸುವಲ್ಲಿ ನಿಸ್ಸಿಮ ಪಕ್ಷಿ. ಇತರ ಪಕ್ಷಿಗಳ ಕೂಗನ್ನು ಅನುಕರಣೆ ಮಾಡುತ್ತದೆ.

# ಬಾಲದಂಡೆ ಹಕ್ಕಿ
## Indian paradise flycatcher
*Terpsiphone paradisi*



© ನಾಗೇಶ್ ಒ. ಎಸ್.

**ಲಕ್ಷಣಗಳು:** ತಲೆ ಮತ್ತು ಜುಟ್ಟು ಕಪ್ಪಿನ ಬಣ್ಣದಲ್ಲಿರುತ್ತದೆ ಹಾಗು ರೆಕ್ಕೆ ತುದಿ ಬೂದು ಬಣ್ಣದ್ದಾಗಿರುತ್ತದೆ. ಗಂಡು ಪಕ್ಷಿಗೆ ಆಕರ್ಷಣೀಯ ಉದ್ದನೆಯ ಗರಿಗಳಿರುತ್ತವೆ. ಹೆಣ್ಣು ಪಕ್ಷಿಯ ಎದೆ, ಹೊಟ್ಟೆ ಬಿಳಿ ಹಾಗು ಇತರ ಭಾಗ ಕಂದು ಬಣ್ಣದಿಂದ ಕೂಡಿದ್ದು ಬಾಲವು ಗಂಡು ಪಕ್ಷಿಯಂತೆ ಉದ್ದವಿರುವುದಿಲ್ಲ.

**ಹಂಚಿಕೆ ಮತ್ತು ಆವಾಸ:** ಬಿದಿರು ಮೆಳೆ, ಕಾಡು, ತೋಟ, ಜನವಸತಿ ಪ್ರದೇಶ.

**ಆಹಾರ:** ನೊಣಗಳು.

**ಕೂಗು:** ಚಿ... ಚಿವ್... ಕೆಲವೊಮ್ಮೆ ಟ್ರಿಕ್... ಟ್ರಿಕ್..

**ಗೂಡು:** ಮರದ ಕವಲುಗಳಲ್ಲಿ ಹುಲ್ಲು, ನಾರುಗಳಿಂದ ಕೂಡಿದ ಬಟ್ಟಲಿನಾಕಾರದ ಗೂಡನ್ನು ಕಟ್ಟಿ, ಅದಕ್ಕೆ ಹೊರಮೈಗೆ ಜೇಡರ ಬಲೆಯನ್ನು ಸುತ್ತುತ್ತವೆ.

**ಸಂತಾನೋತ್ಪತ್ತಿ:** ಮೇ – ಜುಲೈ; 3-4 ಮೊಟ್ಟೆಗಳನಿಟ್ಟು 21 ದಿನಗಳ ಕಾಲ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಗಂಡು ಪಕ್ಷಿಗಳು ಉದ್ದನೆಯ ಬಾಲವನ್ನು ಹೊಂದಿರುತ್ತವೆ. ಇದರ ಬಾಲವು ತನ್ನ ದೇಹದ ಎರಡರಷ್ಟಿರುತ್ತದೆ. ಮಧ್ಯಪ್ರದೇಶದ ರಾಜ್ಯಪಕ್ಷಿ. ಗಂಡು ಪಕ್ಷಿಯು ಹಾರುವಾಗ ಬಿಳಿ ಗರಿಗಳು ಗಾಳಿಪಟದ ಬಾಲಂಗೋಚಿಯಂತೆ ಆಕರ್ಷಕವಾಗಿ ಕಾಣುತ್ತದೆ.

# ಗೀಜಗ
## Baya Weaver
*Ploceus philippinus*



© ಭಗವತಿ ಬಿ. ಎಂ.

**ಲಕ್ಷಣಗಳು:** ಗುಬ್ಬಚ್ಚಿ ಗಾತ್ರದ ಹಳದಿ ಪಕ್ಷಿ. ನೆತ್ತಿ, ತಲೆ, ಎದೆಯ ಹಿಂಭಾಗ ಹಳದಿ; ಹೊಟ್ಟೆ ಬಿಳಿ; ಕೆನ್ನೆ ಹಾಗೂ ಗದ್ದ ಕಪ್ಪು; ರೆಕ್ಕೆ, ಬೆನ್ನು, ಬಾಲ, ಕೊಕ್ಕು ಹಾಗೂ ಕಾಲುಗಳು ಕಂದು. ಹೆಣ್ಣು ಪಕ್ಷಿ ಕಂದಾಗಿದ್ದು, ಹೆಣ್ಣು ಗುಬ್ಬಚ್ಚಿಯನ್ನು ಹೋಲುತ್ತದೆ.

**ಹಂಚಿಕೆ ಮತ್ತು ಆವಾಸ:** ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಬರ್ಮಾ; ಜೌಗು ಪ್ರದೇಶ, ಕೃಷಿ ಭೂಮಿ.

**ಆಹಾರ:** ಕೀಟಗಳು.

**ಕೂಗು:** ಗುಬ್ಬಚ್ಚಿಯಂತೆ ಚಿವ್_ ಚಿವ್_ ಚಿವ್_

**ಗೂಡು:** ಹುಲ್ಲು, ನಾರುಗಳಿಂದ ಸೂಕ್ಷ್ಮವಾಗಿ ಹೆಣೆದ ಹೂಜಿಯಾಕಾರದ ನೇತಾಡುವ ಗೂಡುಗಳನ್ನು ಕಟ್ಟುತ್ತವೆ.

**ಸಂತಾನೋತ್ಪತ್ತಿ:** ಮೇ–ಸೆಪ್ಟೆಂಬರ್ ; 2-4 ಮೊಟ್ಟೆಗಳಿಗೆ ಸುಮಾರು 18 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಗೂಡು ನಿರ್ಮಿಸಿ ಸಂತಾನೋತ್ಪತ್ತಿ ಮಾಡುವ ಪರಿ ವಿಶಿಷ್ಟವಾದದ್ದು.

# ಬದನಿಕೆ
## Pale-billed flowerpecker
*Dicaeum erythrorhynchos*



© ಭಗವತಿ ಬಿ. ಎಂ.

**ಲಕ್ಷಣಗಳು:** ಗುಬ್ಬಚ್ಚಿ ಗಿಂತ ಚಿಕ್ಕದಾದ ಪಾಚಿ ಮಿಶ್ರಿತ ಬೂದು ಪಕ್ಷಿ. ಗದ್ದ, ಕತ್ತು ಹಾಗೂ ತಳಭಾಗ ಬಿಳಿ; ಚಿಕ್ಕ ಕೊಕ್ಕು ಕಂದು; ಚಿಕ್ಕ ಕಾಲುಗಳು ಕಪ್ಪು; ಮೋಟು ಬಾಲ ಕಡು ಬೂದಾಗಿರುತ್ತದೆ.

**ಹಂಚಿಕೆ ಮತ್ತು ಆವಾಸ:** ಭಾರತ, ಬಾಂಗ್ಲಾದೇಶ , ಶ್ರೀಲಂಕಾ ಹಾಗೂ ಪಶ್ಚಿಮ ಮ್ಯಾನ್ಮಾರ್; ಕುರುಚಲು ಕಾಡು, ತೋಟ, ಜನವಸತಿ ಪ್ರದೇಶ.

**ಆಹಾರ:** ಮಕರಂದ ಮತ್ತು ಹಣ್ಣುಗಳು.

**ಕೂಗು:** ಚಿಕ್_ ಚಿಕ್_ ಚಿಕ್_

**ಗೂಡು:** ನಾರು, ಎಲೆ ಹಾಗೂ ಇತರ ಮೃದು ವಸ್ತುಗಳಿಂದ ಕೂಡಿದ ನೇತಾಡುವ ಚಿಕ್ಕ ಗೂಡನ್ನು ಕಟ್ಟುತ್ತದೆ.

**ಸಂತಾನೋತ್ಪತ್ತಿ:** ಫೆಬ್ರವರಿ–ಜೂನ್, 2-4 ಬಿಳಿ ಮೊಟ್ಟೆಗಳಿಟ್ಟು ಮರಿ ಮಾಡುತ್ತವೆ.

**ವಿಶೇಷತೆ:** ಬದನಿಕೆ ಲೊರಾಂಥೇಸಿ ಕುಟುಂಬಕ್ಕೆ ಸೇರಿದ ಪರಾವಲಂಬಿ ಸಸ್ಯಗಳ ಬೀಜ ಪ್ರಸರಣಕ್ಕೆ ಸಹಾಯ ಮಾಡುತ್ತದೆ.

ಈ ಕಿರು ಹೊತ್ತಿಗೆಯಲ್ಲಿ ಬೆಂಗಳೂರು ಅರೆನಗರೀಕರಣ ಪ್ರದೇಶದ ಕಾಮನ್ಸ್ ಗಳಲ್ಲಿ ಸಿಗುವಂತಹ ಸಾಮಾನ್ಯ ಪಕ್ಷಿಗಳ ಕುರಿತು ಮಕ್ಕಳಿಗೆ ಮತ್ತು ಜನ ಸಾಮಾನ್ಯರಿಗೆ ಅವುಗಳ ಆವಾಸಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಸಂಕ್ಷಿಪ್ತ ಮಾಹಿತಿ ಮತ್ತು ಛಾಯಾಚಿತ್ರಗಳ ಮೂಲಕ ವಿವರಿಸಲಾದ ಒಂದು ಸಣ್ಣ ಕಿರು ಹೊತ್ತಿಗೆ.





In Association with :

BENGALURU SUSTAINABILITY FORUM

Ramakrishna Mission, Shivanahalli

WCG
Wildlife Conservation Group

₹ 50